# ರೊಕ್ಕ ಎರಡಕ್ಕು ದುಃಖ ಕಾಣಕ್ಕ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics mentioned without highlights are as per Ref. 2. The wordings in Ref. 1 is same as in Ref. 1 except few words which are given in grey highlights. Lyrics mentioned in yellow highlights are as per Ref. 3.
5. **Note:** Singer has followed lyrics as in Ref. 2.

| | |
|---|---|
| ರಾಗ: ಪಂತುವರಾಳಿ ತಾಳ: ಅಟ | ರಾಗ: ಪೂರ್ವಿ ತಾಳ: ಅಟ |
| | |
| ರೊಕ್ಕ ಎರಡಕ್ಕು ದುಃಖ ಕಾಣಕ್ಕ \|\| p \|\| | ರೊಕ್ಕ ಎರಡಕ್ಕೆ ದುಃಖ |
| | ಗಕ್ಕನೆ ಹೋದರೆ ಘಾತ ಕಾಣಕ್ಕ |
| | |
| ಮಕ್ಕಳ ಮರಿಗಳ ಮಾಡೋದು ರೊಕ್ಕ | ಚಿಕ್ಕತನಕೆ ತಂದು ಕೆಡಿಸುವುದು ರೊಕ್ಕ |
| ಸಕ್ಕರೆ ತುಪ್ಪವ (ತಿನಿಸೋದು) (ಸವಿಸೋದು) ರೊಕ್ಕ | ಮಕ್ಕಳ ಮರಿಗಳ ಮಾಳ್ಪುದು ರೊಕ್ಕ |
| ಕಕ್ಕುಲಾತಿಯನು ಬಿಡಿಸೋದು ರೊಕ್ಕ | ಸಕ್ಕರೆ ತುಪ್ಪವ ಸಲಿಸುವುದು ರೊಕ್ಕ |
| ಘಕ್ಕನೆ ಹೋದರೆ ಘಾತ ಕಾಣಕ್ಕ \|\| 1 \|\| | ಕಕ್ಕುಲಾತಿಗೆ ತಂದು ಕೆಡಿಸುವುದು ರೊಕ್ಕ |
| | |
| ನೆಂಟರ ಇಷ್ಟರ ಮರೆಸೋದು ರೊಕ್ಕ | ಕುಂಟರ ಕುರುಡರ ಕುಣಿಸುವುದು ರೊಕ್ಕ |
| ಕಂಟಕಗಳ ಪರಿಹರಿಸೋದು ರೊಕ್ಕ | ಗಂಟು ಮಾಡಲಿಕ್ಕೆ ಕಲಿಸುವುದು ರೊಕ್ಕ |
| ಗಂಟು ಕಟ್ಟಲಿಕೆ ಕಲಿಸೋದು ರೊಕ್ಕ | ಬಂಟರನೆಲ್ಲ ವಶ-ಮಾಡುವುದು ರೊಕ್ಕ |
| ತುಂಟತನಗಳನು ಬಲಿಸೋದು ರೊಕ್ಕ \|\| 2 \|\| | ತುಂಟತನಕೆ ತಂದು ನಿಲಿಸುವುದು ರೊಕ್ಕ |
| | |
| ಇಲ್ಲದ ಗುಣಗಳ ತರಿಸೋದು ರೊಕ್ಕ | ಇಲ್ಲದ ಗುಣಗಳ ಕಲಿಸುವುದು ರೊಕ್ಕ |
| ಸಲ್ಲದ ನಾಣ್ಯವ ನಡಿಸೋದು ರೊಕ್ಕ | ಸಲ್ಲದ ನಾಣ್ಯವ ಸಲಿಸುವುದು ರೊಕ್ಕ |
| ಬೆಲ್ಲಕ್ಕಿಂತಲು ಬಹು ಸವಿ ರೊಕ್ಕ | ಬೆಲ್ಲದಕಿಂತಲೂ ಸವಿಯಾದ ರೊಕ್ಕ |
| ಇಲ್ಲದಿರಲು ಬಹು ದುಃಖ ಕಾಣಕ್ಕ \|\| 3 \|\| | ಕೊಲ್ಲಲಿಕ್ಕೆ ಕಾರಣವಾಯಿತು ರೊಕ್ಕ |

| | |
|---|---|
| ಉಂಟಾದ ಗುಣಗಳ ಮರೆಸೋದು ರೊಕ್ಕ | ಉಂಟಾದ ಗುಣಗಳ ಬಿಡಿಸುವುದು ರೊಕ್ಕ |
| ಬಂಟರನೆಲ್ಲರ ಬರಿಸೋದು ರೊಕ್ಕ | ನಂಟರ ಇಷ್ಟರ ಮಾಡುವುದು ರೊಕ್ಕ |
| ಕಂಠಿ ಸರಿಗೆಯನು ಗಳಿಸೋದು ರೊಕ್ಕ | ಒಂಟೆ ಆನೆ ಕುದುರೆ ತರಿಸುವುದು ರೊಕ್ಕ |
| ಒಂಟೆ ಕುದುರೆ ಆನೆ ತರಿಸೋದು ರೊಕ್ಕ ‖ 4 ‖ | ಕಂಟಕಗಳನೆಲ್ಲ ಬಿಡಿಸುವುದು ರೊಕ್ಕ |
| | |
| ವಿದ್ಯದ ಮನುಜರ ಕರೆಸೋದು ರೊಕ್ಕ | ವಿದ್ವಜ್ಜನರ ವಶ ಮಾಡುವುದು ರೊಕ್ಕ |
| ಹೊದ್ದಿದ ಜನರನು ಬಿಡಿಸೋದು ರೊಕ್ಕ | ಹೊದ್ದಿದವರನು ಹೊರೆವುದು ರೊಕ್ಕ |
| ಮುದ್ದು ಪುರಂದರ ವಿಠಲನ ಮರೆಸುವ | ಮುದ್ದು ಪುರಂದರ ವಿಠ್ಠಲನ ಮರೆಸುವ |
| ಬಿದ್ದು ಹೋಗುವ ರೊಕ್ಕವ ಸುಡು ನೀನಕ್ಕ ‖ 5 ‖ | ಬಿದ್ದು ಹೋಗುವ ರೊಕ್ಕ ಸುಡು ನೀನಕ್ಕ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಸಿರಿವಂತಿಕೆ ಅಸ್ಥಿರವೆಂಬುದನ್ನು ಮತ್ತು ಸಿರಿವಂತಿಕೆ ಅವಿವೇಕಕ್ಕೆ ಗುರಿ ಮಾಡುವುದೆಂಬುದನ್ನು ಈ ಹಾಡಿನಲ್ಲಿ ದಾಸರು ಹೇಳಿದ್ದಾರೆ.

ಹಣವನ್ನು 'ಹೊರಗಿನ ಪ್ರಾಣ' ಎನ್ನುತ್ತಾರೆ. ಇಂಥ ಬಲಿಷ್ಠವಾದ, ಅತ್ಯವಶ್ಯಕವಾದ ಹಣವನ್ನು ಪುರಂದರ ದಾಸರು ಇನ್ನೊಂದು ದಿಕ್ಕಿನಿಂದ ನೋಡಬಯಸುತ್ತಾರೆ. ಅದೇನೆಂದರೆ ರೊಕ್ಕ ಮನುಷ್ಯನ 'ತುಂಟತನ'ಗಳನ್ನು ಬೆಳೆಸುತ್ತ ಹೋಗುತ್ತದೆ. ತನ್ನ ಆಂತರಿಕ ಮೌಲ್ಯವನ್ನು ತೋರಗೊಡದೆ ತನ್ನ ಅಸ್ತಿತ್ವ ಎಷ್ಟು ಪ್ರಭಾವಶಾಲಿಯಾದದ್ದೆಂಬುದನ್ನು ದರ್ಪದಿಂದ ತೋರಿಸಿಕೊಡುತ್ತ ಸಾಗುತ್ತದೆ. ಬರಿಯ ಕ್ಲೇಶ ಕಳವಳಗಳನ್ನೇ ತರುವ ಈ ರೊಕ್ಕವನ್ನು ಕವಿ ತಿರಸ್ಕರಿಸಿದ್ದಾನೆ.

**ಎರಡಕ್ಕು ದುಃಖ** – ಇದ್ದರೂ ದುಃಖ, ಇಲ್ಲದಿದ್ದರೂ ದುಃಖ.

**ಕಕ್ಕುಲಾತಿ** – ಕಕ್ಕುಲತೆ, ಪ್ರೀತಿ.

**ಹೊದ್ದಿದ ಜನರನು** – ಹೊಂದಿದ್ದ ಜನರನ್ನು, ಬಳಿ ಇದ್ದವರನ್ನು.

**ರೊಕ್ಕ** = ಹಣ

**Classification:** Keerthane
**Ankita:** purandara vittala
**Location:** NA
**Category:** HitaNudi, Jeevana Sambodhane
**Sub-Category:** rokka, dukha, makkalu, sakkare, tuppa, bandhu, guna, bella, kudure, gaja, jana,
**Pravachana:** NA
**Explanation:** NA